**ದಿನಾಂಕಃ 27/09/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:** ಆರೋಪಿತರ **ಪರ ಶ್ರೀ** ಕೆ ಆರ್ ವಿ **ವಕೀಲರಿಂದಃ**

3. ದಿಃ 11/04/2017 ರಲ್ಲಿ ಈ ಘಟನೆ ನಡೆಯಿತು. ಫ್ರಾಸಾ–1 ನನ್ನ ಅತ್ತೆ. ಫ್ರಾಸಾ–1 ರವರು ಸೂಳೆಕೋಟೆ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ. ಅವರು ಸೋಮವಾರ ಪೇಟೆ ತಾಲ್ಲೂಕು, ಶಿರಂಗಾಲ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಗ್ರಾಮ ಪಂಚಾಯತಿಯವರು ನೀಡಿರುವ ದಾಖಲೆಗಳನ್ನು ತೋರಿಸಿ ಫ್ರಾಸಾ–1 ರವರು ಶಿರಂಗಾಲ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸಾಕ್ಷಿಯು ಇಲ್ಲವೆಂದು ನುಡಿಯುತ್ತಾರೆ, ಆದ್ದರಿಂದ ಸದರಿ ದಾಖಲೆಗಳನ್ನು ನಿಶಾನೆಗೊಳಿಸಲಿಲ್ಲ. ಫ್ರಾಸಾ–1 ರವರ ಗಂಡ 8–9 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ಯಾವ ದಿನಾಂಕದಂದು ತೀರಿಕೊಂಡರು ಎಂದು ಗೊತ್ತಿಲ್ಲ.

4. ಮನೆ ಜಾಗ ಖಾಲಿ ಮಾಡಿ ಎಂದು ಆರೋಪಿತರು ಫ್ರಾಸಾ–1 ರವರೊಂದಿಗೆ ಜಗಳ ಮಾಡಿದರು. ಆಗ ನಾನು, ನನ್ನ ಮಾವ ಮತ್ತು ಫ್ರಾಸಾ–1 ರವರು ಮನೆಯ ಮುಂದೆ ಕೂತಿದ್ದೆವು. ಜಗಳವಾದ ಸ್ಥಳ ಮನೆ. ಮನೆಯ ಜಂಜರ್ ನಂಬರ್, ಅಸ್ಸೆಸ್ಮೆಂಟ್ ನಂಬರ್ ಗೊತ್ತಿಲ್ಲ. ಕೇಸು ನಮ್ಮ ಪರವಾಗಿ ಆಗಿದೆ ಎಂದು ನನ್ನ ಮೈದುನ ವೆಂಕಟೇಶ ರವರು ತಿಳಿಸಿದರು. ಘಟನಾ ಸ್ಥಳದ ಮನೆಗೂ ಮತ್ತು ನಮ್ಮ ಮನೆಗೂ 50 ಅಡಿ ಅಂತರ ಇದೆ. ಆರೋಪಿತರ ಮನೆ ಮತ್ತು ನಮ್ಮ ಮನೆಗೂ ಮಧ್ಯೆ ರಸ್ತೆ ಇದೆ. ಘಟನೆ ನಡೆದ ಮನೆ ಶೀಟಿನ ಮನೆ. ಆರೋಪಿತರು ಸದರಿ ಮನೆಗೆ ದಾವೆಯನ್ನು ಹೂಡಿ ಅವರ ಪರವಾಗಿ ತೀರ್ಪು ಆಗಿದೆ ಎಂದರೆ ಸರಿ. ಘಟನಾ ಸ್ಥಳ ಖಾಲಿ ನಿವೇಶನ ಎಂದರೆ ಸರಿಯಲ್ಲ. ಘಟನಾ ಸ್ಥಳ ಸವಿತಾ ಸಮಾಜಕ್ಕೆ ಸರ್ಕಾರದವರು ನೀಡಿರುವ ಜಾಗ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ತೋರಿಸಿ ಅವರು ಸವಿತಾ ಸಂಘದ ಅಧ್ಯಕ್ಷರು ಅವರಿಗೆ ಸರ್ಕಾರದಿಂದ ಜಾಗ ಮಂಜೂರಾಗಿದೆ ಎಂದರೆ ಸರಿಯಲ್ಲ. ಅದರ ಜಂಜರ್ ನಂಬರ್ 185 ಅದಕ್ಕೆ ಕಂದಾಯ ಪಾವತಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿವೇಶನ ಹಕ್ಕು ಪತ್ರ ತೋರಿಸಿ

ಸದರ ಪತ್ರದ ಮುಖಾಂತರ ಸವಿತಾ ಸಂಘಕ್ಕೆ ಸರ್ಕಾರದವರು ಜಾಗ ಮಂಜೂರು ಮಾಡಿದ್ದಾರೆ ಎಂದರೆ ಸಾಕ್ಷಿಯ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ಅದನ್ನು ನಿಶಾನೆಗೊಳಿಸಲಿಲ್ಲ. ಸವಿತಾ ಸಂಘದ ಕಾರ್ಯದರ್ಶಿ ಮತ್ತು ಅಧ್ಯಕ್ಷರು, ವೆಂಕಟೇಶ ಮತ್ತು ರಾಮಚಂದ್ರ ರವರ ವಿರುದ್ಧ ದೂರನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದೂರನ್ನು ಈ ನ್ಯಾಯಾಲಯದಲ್ಲಿ ರಾಜೀ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

5. ಜಗಳದ ಸಮಯದಲ್ಲಿ ನಮ್ಮನ್ನು ಬಿಟ್ಟು ಬೇರೆ ಯಾರಿದ್ದರು ಎಂದು ಈಗ ನೆನಪಿಲ್ಲ. ಘಟನಾ ಸ್ಥಳದ ಅಕ್ಕಪಕ್ಕ ಮನೆಗಳು ಇವೆ. ಘಟನಾ ಕಾಲಕ್ಕೆ ಅವರು ಇರಲಿಲ್ಲ. ಈ ಕೇಸಿಗೆ ಸಂಬಂಧಿಸಿದಂತೆ ನಾನು ಪೊಲೀಸರಿಗೆ ಆಸ್ಪತ್ರೆಯಲ್ಲಿದ್ದಾಗ ಹೇಳಿಕೆ ಕೊಟ್ಟಿದ್ದೆ. ಘಟನೆ ನಡೆದ 2 ದಿನಗಳ ನಂತರ ಹೇಳಿಕೆ ಕೊಟ್ಟಿದ್ದೆ. ಹೇಳಿಕೆಯನ್ನು ಕೈಯಲ್ಲಿ ಬರೆದುಕೊಂಡರು. ಹೇಳಿಕೆಯನ್ನು ಬರೆದುಕೊಂಡ ನಂತರ ಓದಿ ಹೇಳಿದರು. ಫ್ರಾಸಾ–1 ಮತ್ತು ನನ್ನನ್ನು ವೆಂಕಟೇಶರವರು ಆಸ್ಪತ್ರೆಗೆ ಸೇರಿಸಿದ್ದರು. ಆರೋಪಿತರು ಕಪ್ಪು ಜೀಪಿನಲ್ಲಿ ಘಟನಾ ಕಾಲಕ್ಕೆ ಬಂದಿದ್ದರು. ಘಟನೆ ಸ್ಥಳದ ಚಕ್ಕುಬಂದಿ ಗೊತ್ತಿಲ್ಲ.

6. ಮು.ಮಾ.1 ರಿಂದ 4 ನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ 4 ನ್ನು ಪೊಲೀಸರಿಗೆ ಯಾರು ಕೊಟ್ಟರು ಎಂದರೆ ಸಾಕ್ಷಿಯು ನನ್ನ ಮೈದುನನಿಗೆ ಕೇಳಬೇಕು ಎಂದು ನುಡಿಯುತ್ತಾರೆ. ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ನ್ನು ತಂಬಾಕು ಎಲೆ ಕಟ್ಟುವುದಕ್ಕೆ ಬಳಸುತ್ತಾರೆ ಎಂದರೆ ಸರಿಯಲ್ಲ. ಕೊಲೆ ಬೆದರಿಕೆ ಹಾಕಿದ್ದು ಮತ್ತು ಅವಾಚ್ಯ ಶಬ್ದಗಳಿಂದ ಬೈದಿದ್ದನ್ನು ನಮ್ಮನ್ನು ಬಿಟ್ಟು ಬೇರೆ ಯಾರೂ ಕೇಳಿಸಿಕೊಂಡಿಲ್ಲ ಎಂದರೆ ಸಾಕ್ಷಿಯು ನಮ್ಮ ಮನೆ ಜನ ಇದ್ದರು ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ಪೊಲೀಸರು ಮಹಜರ್ ಮಾಡಿಲ್ಲ. ಫ್ರಾಸಾ–1 ರವರ ಮಾಹಿತಿ ಮೇರೆಗೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲೆ ಹಲ್ಲೆ ಮಾಡಿಲ್ಲ, ಬಟ್ಟೆ ಹರಿದು ಹಾಕಿಲ್ಲ ಎಂದರೆ ಸರಿಯಲ್ಲ.

7. ಘಟನಾ ಸ್ಥಳ ಆರೋಪಿತರಿಗೆ ಸೇರಿದ್ದರಿಂದ ಅದನ್ನು ಲಪಟಾಯಿಸಲು ಸುಳ್ಳು ಕೇಸು ಸೃಷ್ಟಿಸಿ, ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಫ್ರಾಸಾ–1 ರವರು ನಮ್ಮ ಗ್ರಾಮದ ವಾಸಿಯಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**